# <u>ಮಾಡು ಸಿಕ್ಕದಲ್ಲಾ ಮಾಡಿನ ಗೂಡು ಸಿಕ್ಕದಲ್ಲಾ</u>

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 448.
2. **Ref.:** Purandara Sahitya Darshana, Samputa 3, Samaja Darshana edited by Prof. S.K. Ramachandra Rao, page No. 350.
3. **Note:** The lyrics in both the above references are same and singer has followed these wordings.

ರಾಗ: ಪಂತುವರಾಳಿ ತಾಳ: ಏಕ

ಮಾಡು ಸಿಕ್ಕದಲ್ಲಾ ಮಾಡಿನ ಗೂಡು ಸಿಕ್ಕದಲ್ಲಾ
ಜೋಡು ಹೆಂಡಿರಂಜಿ ಓಡಿ ಹೋಗುವಾಗ ಗೋಡೆ ಬಿದ್ದು ಬಯಲಾಯಿತಲ್ಲಾ ‖ ಪ ‖

ಎಚ್ಚರಗೊಳಲಿಲ್ಲಾ ಮನವೆ ಹುಚ್ಚನಾದೆನಲ್ಲಾ
ಅಚ್ಚಿನೊಳಗೆ ಮೆಚ್ಚು ಮೆಚ್ಚಿನೊಳಗೆ ಅಚ್ಚು ಕಿಚ್ಚೆದ್ದು ಹೋಯಿತಲ್ಲಾ ‖ 1 ‖

ಮುಪ್ಪು ಬಂದಿತಲ್ಲಾ ತಪ್ಪದೆ ಪಾಯಸ ಉಣಲಿಲ್ಲಾ
ತುಪ್ಪದ ಬಿಂದಿಗೆ ತಿಪ್ಪೇ ಮೇಲೆ ಧೊಪ್ಪನೆ ಬಿತ್ತಲ್ಲಾ ‖ 2 ‖

ಯೋಗವು ಬಂತಲ್ಲಾ ಬದುಕು ವಿಭಾಗವಾಯಿತಲ್ಲಾ
ಭೋಗಿಶಯನ ಶ್ರೀ ಪುರಂದರ ವಿಠಲನ ಆಗ ನೆನೆಯಲಿಲ್ಲಾ ‖ 3 ‖

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

**ಮಾಡು** – ಭಕ್ತಿ; ಮಾಡಿನ ಗೂಡು–ಭಕ್ತಿಗಮ್ಯನಾದ ಪರಮಾತ್ಮ.

**ಜೋಡ ಹೆಂಡಿರು** – ಚಿತ್ತ ಮತ್ತು ಬುದ್ದಿ. ಅನ್ಯಥಾಜ್ಞಾನ, ಹರಿವಿಸ್ಮರಣೆ (ಜೀವನಿಗೆ ಸಂಸಾರಾವಸ್ಥೆಯಲ್ಲಿ ಹೊಂದಿಕೊಳ್ಳುವುವು).

**ಗೋಡೆ** – ಗೋಡೆ ಅಂದರೆ ನಮ್ಮ ದೇಹ. ಈ ದೇಹಕ್ಕೆ ಅಂಟಿಕೊಂಡಿರುವ ಚಿತ್ತ ಮತ್ತು ಬುದ್ಧಿ. ಇವರೇ ಜೋಡಿ ಹೆಂಡಂದಿರು.

**ಎಚ್ಚರ** – ತತ್ತ್ವವಿವೇಕ.

**ಹುಚ್ಚ** – ಭ್ರಮೆಗಳು (ಸ್ವಾತಂತ್ರ್ಯ ಭ್ರಮ, ಐಕ್ಯ ಭ್ರಮ, ಕರ್ತೃತ್ವ ಭ್ರಮ, ಭೋಕ್ತೃತ್ವ ಭ್ರಮ).

**ಅಚ್ಚಿನೊಳಗೆ ಮೆಚ್ಚು** – ಸಂಸಾರ ಚಕ್ರದಲ್ಲಿ ಒಲುಮೆ.

**ಪಾಯಸ** – ಹರಿನಾಮ ಸ್ಮರಣೆ.

**ತುಪ್ಪದ ಬಿಂದಿಗೆ** – ಸಾಧನ ಶರೀರ.

**ಯೋಗ** – ಲಿಂಗದೇಹದೊಂದಿಗೆ ಸಂಯೋಗ.

**ಬದುಕು ವಿಭಾಗ** – ಪಾಪ ಪುಣ್ಯಗಳಲ್ಲಿ.

**Classification:** Mundige
**Ankita:** sri purandara vittala
**Location:** NA
**Category:** Jeevanoddhara, Mukti Marga
**Sub-Category:** patni, tuppa, Vishnu, baduku, chitta, buddi, deha, papa, punya,
**Pravachana:** Vid. Kallapur Pavamanachar
**Explanation:** NA